VIJAYAKUMAR KANNUR VIJAYAKUMAR KANNUR
Date: 2026.03.07 10:52:59 +0530

**MVC 499/2024**
**ಪಿ.ಡಬ್ಲ್ಯೂ.3**

**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಮುಧೋಳ**

| | |
|---|---|
| ಹೆಸರು | : ಡಾ. ಭೀಮಶೇ ಬಾಗಲಕೋಟ |
| ತಂದೆಯ ಹೆಸರು | : ಹಣಮಂತ |
| ವಯಸ್ಸು | : 39 ವರ್ಷ |
| ಉದ್ಯೋಗ | : ವೈದ್ಯಾಧಿಕಾರಿಗಳು ಜಿಲ್ಲಾ ಆಸ್ಪತ್ರೆ ಬಾಗಲಕೋಟ |
| ವಾಸಸ್ಥಳ | : ಬಾಗಲಕೋಟ |

ಸಾಕ್ಷಿಗೆ ಇಂದು ದಿನಾಂಕ 06.03.2026 ರಂದು ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯವಿಚಾರಣೆಃ**

ಕಳೆದ 3 ವರ್ಷಗಳಿಂದ ನಾನು ಬಾಗಲಕೋಟೆಯ ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿ ಅಂತ ಕರ್ತವ್ಯ ನಿರ್ವಹಿಸುತ್ತಿರುವೆನು. ಈ ಪ್ರಕರಣದ ಅರ್ಜಿದಾರ ಮಹಾಲಿಂಗ ತಂದೆ ಭೀಮಶಿ ಉರ್ಫ ಭೀಮಪ್ಪ ಬಂಡಿವಡ್ಡರ ಇವರು ರಸ್ತೆಯ ಅಪಘಾತದ ಹಿನ್ನೇಲೆಯಲ್ಲಿ ಗಾಯಗೊಂಡು ನಮ್ಮ ಆಸ್ಪತ್ರೆಗೆ ದಿಃ 25.04.2024 ರಂದು ಸಂಜೆ 7.58 ಗಂಟೆಗೆ ಚಿಕಿತ್ಸೆಗಾಗಿ ದಾಖಲಾಗಿರುವರು. ಸದರಿ ಗಾಯಳುವನ್ನು ವೈದ್ಯಕೀಯ ತಪಾಸಣೆಗಾಗಿ ಒಳಪಡಿಸಿದಾಗ ಬಲಗಾಲಿನ ಹಿಮ್ಮಡಿ ನೋವಿನಿಂದ ಆವೃತ್ತವಾಗಿ ಊದಿಕೊಂಡಿತ್ತು. ಆ ಗಾಯಕ್ಕೆ ಎಕ್ಸ ರೇ ಮಾಡಿ ನೋಡಲಾಗಿ ಆ್ಯಂಕಲ್ ಫ್ರಾಕ್ಚರಾಗಿರುವುದು ಕಂಡು ಬಂದಿರುವುದು. ಸದರಿ ಗಾಯಾಳುವಿಗೆ ಯಾವುದೇ ಶಸ್ತ್ರ ಚಿಕಿತ್ಸೆ ಮಾಡಿರುವುದಿಲ್ಲ, ಆದರೆ ಪ್ಲಾಸ್ಟರನ್ನು ಹಾಕಿ ಚಿಕಿತ್ಸೆ ನೀಡಿರುವೆವು. ಸದರಿ ಗಾಯಾಳು ನಮ್ಮ ಆಸ್ಪತ್ರೆಯಲ್ಲಿ ದಿಃ 25.04.2024 ರಿಂದ 04.05.2024 ರವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುವನು. ನಂತರ ಗಾಯಾಳು ಸ್ವ ಇಚ್ಚೆಯಿಂದ ನಮ್ಮ ಆಸ್ಪತ್ರೆಯಿಂದ ಬಿಡುಗಡೆಯಾಗಿ ಹೆಚ್ಚಿನ ಚಿಕಿತ್ಸೆಗಾಗಿ ಬೇರೆ ಆಸ್ಪತ್ರೆಗೆ ಹೋಗಿರುವರು.

2. ಗಾಯಾಳುವಿನ ಒ.ಪಿ.ಡಿ ದಾಖಲಾತಿಯನ್ನು **ನಿಪಿ 19** ಎಂದು ಗುರುತಿಸಲಾಯಿತು. ಗಾಯಾಳುವಿನ ಐ.ಪಿ.ಡಿ ದಾಖಲಾತಿಯನ್ನು **ನಿಪಿ 20** ಎಂದು ಗುರುತಿಸಲಾಯಿತು. ಗಾಯಾಳುವಿನ 3 ಪುಟಗಳ Follow-up ಶೀಟ್ ನ್ನು **ನಿಪಿ 21** ಎಂದು ಗುರುತಿಸಲಾಯಿತು. ಎರಡು ಪುಟಗಳ ರಕ್ತದ ಪರೀಕ್ಷೆಯ ವರದಿಯನ್ನು **ನಿಪಿ 22** ಎಂದು ಗುರುತಿಸಲಾಯಿತು. ಇ.ಸಿ.ಜೆ

ವರದಿಯನ್ನು ನಿಪಿ **23** ಎಂದು ಗುರುತಿಸಲಾಯಿತು. ಗಾಯಾಳು ಶಸ್ತ್ರ ಚಿಕಿತ್ಸೆಗಾಗಿ ಸಮ್ಮತಿ ಸೂಚಿಸಿರುವ ದಾಖಲಾತಿಯನ್ನು ನಿಪಿ **24** ಎಂದು ಗುರುತಿಸಲಾಯಿತು. ಆದರೆ ಶಸ್ತ್ರ ಚಿಕಿತ್ಸೆಗಾಗಿ ಗಾಯಾಳುವಿನ ಜೊತೆ ಬಂದಿರುವಂತಹ ಪಾಲಕರು ತಮ್ಮದು ಸಮ್ಮತಿ ಇರುವುದಿಲ್ಲ ಎಂದು ಹೇಳಿರುವುದರಿಂದ ಶಸ್ತ್ರ ಚಿಕಿತ್ಸೆ ಮಾಡಿರುವುದಿಲ್ಲ. ಗಾಯಾಳುವಿನ ಎಕ್ಸ ರೇ ಫಿಲ್ಮ ನ್ನು ನಿಪಿ **25** ಎಂದು ಗುರುತಿಸಲಾಯಿತು.

ಪಾಟೀ ಸವಾಲು: ಅರ್ಜಿದಾರ, ಎದುರುದಾರ 1 ಮತ್ತು 2 ಹಾಗೂ ವಕೀಲರನ್ನು ಕೂಗಿಸಲಾಯಿತು, ನ್ಯಾಯಾಲಯದಲ್ಲಿ ಹಾಜರು ಇರದ ಕಾರಣ ಅವರ ಪರವಾಗಿ ಯಾವುದೇ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ. ಹೇ. ಕೇ. ಸರಿ ಅದೆ.

ಸಾಕ್ಷಿದಾರರ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಮುಧೋಳ.